ದಿನಾಂಕಃ 05-09-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ನನಗೆ ಎರಡು ಜನ ಗಂಡು ಮಕ್ಕಳು, ನಾಲ್ಕು ಜನ ಗಂಡು ಮಕ್ಕಳು. ಎಲ್ಲ ಹೆಣ್ಣುಮಕ್ಕಳ ಮದುವೆ ಮಾಡಿಕೊಟ್ಟಿರುತ್ತೇನೆ. ನನ್ನ ಗಂಡು ಮಕ್ಕಳ ಪೈಕಿ ಒಬ್ಬರ ಮದುವೆಯಾಗಿದೆ.

ನಾನು 2000 ನೇ ಸಾಲಿನಲ್ಲಿ ಸ್ವಯಂ ನಿವೃತ್ತಿ ಪಡೆದಿದ್ದೇನೆ. ನನ್ನ ಮೇಲೆ ಪ್ರಕರಣ ದಾಖಲಾಗಿದ್ದರಿಂದ ಸ್ವಯಂ ನಿವೃತ್ತಿ ಪಡೆದಿದ್ದೇನೆ ಎಂದರೆ ಸರಿ ಅಲ್ಲ. ನಮ್ಮ ಸಮುದಾಯದಲ್ಲಿ ಮದುವೆ ಪೂರ್ವದಲ್ಲಿ ಹೆಣ್ಣುಮಗಳನ್ನು ನೋಡಲು ಬಂದಾಗ ಹಸ್ತ ಮುದ್ರೆಗಳನ್ನು ನೋಡುತ್ತಾರೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರ ನೀಡದೇ ಸುಮ್ಮನೆ ನಿಂತಿರುತ್ತಾರೆ. ನಮ್ಮ ಸಂಪ್ರದಾಯದಲ್ಲಿ ಹೆಣ್ಣು ಮತ್ತು ಗಂಡಿನ ಕುಂಡಲಿ ನೋಡುತ್ತಾರೆ ಎಂದರೆ ಸರಿ ಅಲ್ಲ.

ಸಿಂಧನೂರಿನಲ್ಲಿರುವ ನಮ್ಮ ಮನೆಯು ಪೋ.ಠಾಣೆಯಿಂದ 500 ಮೀ ಅಂತರದಲ್ಲಿ ಇದೆ ಎಂದರೆ ಸರಿ. ದ್ವಿಚಕ್ರ ವಾಹನದ ಮೂಲಕ ಬಂದರೇ5-10 ನಿಮಿಷದಲ್ಲಿ ಪೋ.ಠಾಣೆಗೆ ಬರಬಹುದು ಎಂದರೆ ಸರಿ. ನಮ್ಮ ಮನೆಯ ಸುತ್ತ ಮುತ್ತ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಅಲ್ಲಿ ಜನಸಂದಣಿ ಇರುತ್ತದೆ ಎಂದರೆ ಸರಿ ಅಲ್ಲ.

ಮದುವೆ ಸಂದರ್ಭದಲ್ಲಿ ಆರೋಪಿತರಿಗೆ ನೀಡಿದ ಆಭರಣಗಳನ್ನು ಖರೀದಿಸಿದ ರಶೀದಿಗಳು ಇವೆ. ಅವುಗಳನ್ನು ಪೋಲೀಸರಿಗೆ ನೀಡಿಲ್ಲ, ನಮ್ಮ ವಕೀಲರಿಗೆ ನೀಡಿರುತ್ತೇವೆ.

ಸಾಮಾನ್ಯವಾಗಿ ತವರು ಮನೆಯವರು ನೀಡಿದ ಪಾತ್ರೆಗಳ ಮೇಲೆ ಅವರ ಹೆಸರುಗಳನ್ನು ಬರೆದಿರುತ್ತಾರೆ ಎಂದರೆ ಸರಿ. ಚಾಸಾ-4 ರವರು ನಮ್ಮ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುವುದಿಲ್ಲ. ಚಾಸಾ-7 ರಿಂದ 11 ರವರು ನಮ್ಮ ಮನೆಯ ಸುತ್ತ ಮುತ್ತಲೂ ಇರುವ ಜನ ಎಂದರೆ ಸರಿ. ಚಾಸಾ-13 ರಿಂದ 16 ರವರು ನನ್ನ ಮಗನ ಸ್ನೇಹಿತರು ಎಂದರೆ ಸರಿ.

ದೂರು ನೀಡಲು ಪೋ.ಠಾಣೆಗೆ ಒಂದು ಬಾರಿ ಹೋಗಿದ್ದೆವು, ಆದರೆ ನಂತರ ಇನ್ನೊಂದು ಬಾರಿ ಪೋ.ಠಾಣೆಗೆ ಹೋಗಿದ್ದೆ. ಪೋ.ಠಾಣೆಗೆ ನಾನು, ಚಾಸಾ-1 ಮತ್ತು 4 ರವರು ಸೇರಿ ಹೋಗಿದ್ದೇವು. ನಾವು ಪೋ.ಠಾಣೆಗೆ ಎರಡು ಬಾರಿ ಹೋಗಿದ್ದೆವು, ಎರಡನೇ ಬಾರಿಗೆ ಪ್ರಕರಣ ದಾಖಲಿಸಿದ್ದೇವೆ. ಪೋ.ಠಾಣೆಗೆ ಹೋದ ದಿನಾಂಕ ನೆನಪಿಲ್ಲ. ಆ ದೂರಿಗೆ ನಾವು ಮೂರು ಜನ ಸಹಿ ಮಾಡಿದ್ದೇವೆ ಎಂದರೆ ಸರಿ.

ಮಾನವಿಯಲ್ಲಿ ಆರೋಪಿ ಇದ್ದ ಮನೆ ಬಾಡಿಗೆ ಮನೆ ಇತ್ತು, ಅದು ಯಾರ ಮನೆ ಇತ್ತು ನನಗೆ ಗೊತ್ತಿಲ್ಲ. ಆರೋಪಿ ಮನೆಗೆ ನಾನು ಒಂದು ಬಾರಿ ಹೋಗಿದ್ದೆ, ಅದು ಯಾವ ಏರಿಯಾದಲ್ಲಿ ಇದೆ ನನಗೆ ಗೊತ್ತಿಲ್ಲ. ಮಾತುಕತೆ ಸಂದರ್ಭದಲ್ಲಿ ಮಾತ್ರ ನಾನು ಹೋಗಿದ್ದೆ ಎಂದರೆ ಸರಿ . 2019 ನೇ ಸಾಲಿನಲ್ಲಿ ಚಾಸಾ-1 ರವರು ಬಳ್ಳಾರಿಯ ಆದರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ನೀಡಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಚಾಸಾ-1 ರವರು ನಮ್ಮ ಮನೆಯಲ್ಲಿಯೇ ಇದ್ದಾರೆ ಎಂದರೆ ಸರಿ. ಚಾಸಾ-1 ರವರು ಹೇಳಿದಷ್ಟು ನಾನು ಪೋಲೀಸರಿಗೆ ಹೇಳಿದ್ದೇನೆ. ನಾನು ಸ್ವತಃ ಸಮಿಕ್ಷೆ ಮಾಡಿ ಹೇಳಿಕೆ ನೀಡಿಲ್ಲ ಎಂದರೆ ಸರಿ. ದೂರು ನೀಡಲು ಹೋದಾಗ ನನ್ನ ಹೇಳಿಕೆ ಪಡೆದಿದ್ದಾರೆ. ಆ ನಂತರ ನನ್ನನ್ನು ಪೋಲೀಸರು ಕರೆಸಿರುವುದಿಲ್ಲ.

ನಾವು ಆರೋಪಿತರಿಗೆ ಯಾವುದೇ ವರದಕ್ಷಿಣೆ ನೀಡಿಲ್ಲ ಎಂದರೆ ಸರಿ ಅಲ್ಲ. ಆರೋಪಿತರು ಸಿಂಧನೂರಿಗೆ ಬಂದಿಲ್ಲ, ಚಾಸಾ-1 ರವರಿಗೆ ಹೊಡೆಬಡೆ ಮಾಡಿಲ್ಲ ಎಂದರೆ ಸರಿ ಅಲ್ಲ.

ಆರೋಪಿತರು ಬಸ್ ನಿಲ್ದಾಣದಲ್ಲಿ ಹೂವಿನ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ನಾವು ಸ್ಥಿತಿವಂತರು ಎಂದರೆ ಸರಿ. 2 ಮತ್ತು 3 ನೇ ಆರೋಪಿತರಿಗೆ 1 ನೇ ಆರೋಪಿ ಒಬ್ಬನೇ ಮಗ ಎಂದರೆ ಸರಿ.

ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿಲ್ಲ, ವರದಕ್ಷಿಣೆ ಕಿರುಕುಳ ನೀಡಿಲ್ಲ ಎಂದರೆ ಸರಿ ಅಲ್ಲ. ಚಾಸಾ-1 ರವರು ವಿವಾಹ ವಿಚ್ಛೇದನೆ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಅದೇರೀತಿ ಆರೋಪಿಯು 2 ನೇ ಮದುವೆ ಆಗಬಾರದೆಂದು ಕೋರಿ ಒಂದು ಸಿವಿಲ್ ವ್ಯಾಜ್ಯ ಚಾಸಾ-1 ರವರು ಸಲ್ಲಿಸಿದ್ದಾರೆ ಎಂದರೆ ಸರಿ. ಚಾಸಾ-1 ರವರು ಸಲ್ಲಿಸಿದ ವಿವಾಹ ವಿಚ್ಛೇದನೆ ಅರ್ಜಿಯು

ಪುರಸ್ಕೃತಗೊಂಡಿದೆ ಎಂದರೆ ಸರಿ ಅಲ್ಲ. ಆ ಅರ್ಜಿಯಲ್ಲಿಯೂ ನಾನು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ಈ ರೀತಿ ಪ್ರಕರಣ ದಾಖಲಿಸಿ ಕಿರುಕುಳ ನೀಡಿದರೆ ವಿವಾಹ ವಿಚ್ಛೇದನೆ ನೀಡುತ್ತಾರೆ ಎಂದು ಹೇಳಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿ ಅಲ್ಲ. ನಮ್ಮ ಕಿರುಕುಳದಿಂದ 2 ನೇ ಆರೋಪಿ ಮೃತಪಟ್ಟಿದ್ದಾನೆ ಎಂದರೆ ಸರಿ ಅಲ್ಲ, ಆತನು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾನೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ ಅಲ್ಲ.

ನಮ್ಮ ಮನೆಯಲ್ಲಿ ಒಟ್ಟು 6 ಕೋಣೆಗಳು ಇವೆ. ನಮ್ಮ ಮನೆ ನೆಲಮಹಡಿ ಮತ್ತು ಮೊದಲ ಮಹಡಿ ಇವೆ. ನಮ್ಮ ಮನೆ ಮುಂದೆ ದಾರಿ ಇದೆ ಎಂದರೆ ಸರಿ. ನಮ್ಮ ಓಣಿಯಲ್ಲಿ ಗೌಡಪ್ಪ ಗೌಡ ಎನ್ನುವ ಹಿರಿಯರು ಇದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಬೇರೆ ಓಣಿಯಲ್ಲಿದ್ದಾರೆ ನಮ್ಮ ಓಣಿಗೆ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಅವರು ನಮ್ಮ ಓಣಿಯಲ್ಲಿ ಆದ ಜಗಳಗಳನ್ನು ಬಗೆಹರಿಸುತ್ತಾರೆ ಎಂದರೆ ಸರಿ ಅಲ್ಲ.

ನಮ್ಮ ಮನೆಗೆ ಬರಬೇಕಾದರೆ ಪೂರ್ವ ದಿಕ್ಕಿಗೆ ಇರುವ ಮಸೀದಿ ಮುಂದಿನಿಂದ ಬರಬೇಕು ಎಂದರೆ ಸರಿ.ಆ ಮಸೀದಿಯಿಂದ ನಮ್ಮ ಮನೆ 100 ಮೀ ಅಂತರದಲ್ಲಿ ಇರಬಹುದು, ಸಾಕ್ಷಿ ಮುಂದುವರೆದು 70-80 ಅಡಿ ಅಂತರದಲ್ಲಿದೆ ಎಂದು ನುಡಿಯುತ್ತಾರೆ. ಆ ಮಸೀದಿಯ ಮುಂದುಗಡೆ ಬಂಗಾರದ ಅಂಗಡಿಗಳು ಇವೆ ಎಂದರೆ ಸರಿ. ಅದೇರೀತಿ ಮಸೀದಿ ಮುಂದೆ ಹನಮಾನ ದೇವಸ್ಥಾನ ಇದೆ ಎಂದರೆ, ಮುಖ್ಯ ರಸ್ತೆಗೆ ಇದೆ. ಹಾಗಾಗಿ ಅಲ್ಲಿ ಪ್ರಾರ್ಥನೆ ಮಾಡಲು ಸಾಕಷ್ಟು ಜನ ಬರುತ್ತಾರೆ ಎಂದರೆ, ನಮ್ಮ ಮನೆ ಕಡೆ ಬರುವುದಿಲ್ಲ, ನಮ್ಮ ಮನೆ ಸ್ವಲ್ಪ ದೂರದಲ್ಲಿದೆ ಎಂದು ಸಾಕ್ಷಿ ನುಡಿಯುತ್ತಾರೆ.

ಆರೋಪಿತರು ಯಾವತ್ತು ಕೂಡಾ ನಮ್ಮ ಮನೆ ಬಳಿ ಬಂದು ಹೊಡೆಬಡೆ ಮಾಡಿಲ್ಲ ಎಂದರೆ ಸರಿ ಅಲ್ಲ. ಚಾಸಾ-4 ರವರ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.